# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 371(429)

ಸದಸ್ಯರ ಹೆಸರು: ಶ್ರೀ ತಿಪ್ಪೇಸ್ವಾಮಿ ಕೆ.ಎ. (ನಾಮ ನಿರ್ದೇಶನ ಹೊಂದಿರುವವರು)

ಉತ್ತರಿಸುವ ದಿನಾಂಕ: 16.02.2023

ಉತ್ತರಿಸುವವರು: ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆ ಭಾರತ್ ನೆಟ್ ಪ್ರಾಜೆಕ್ಟ್ ನ್ನು ಎಲ್ಲಾ ಗ್ರಾಮ ಪಂಚಾಯತ್ ಗಳಲ್ಲಿ ಅನುಷ್ಠಾನಗೊಳಿಸಲಾಗಿದೆಯೇ; (ಈ ಯೋಜನೆಯ ರೂಪ-ರೇಷೆಗಳು ಒಳಗೊಂಡಂತೆ ಪೂರ್ಣ ವಿವರ ನೀಡುವುದು) | ರಾಜ್ಯದಲ್ಲಿ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆ ಭಾರತ್ ನೆಟ್ ಪ್ರಾಜೆಕ್ಟ್ ನ್ನು ಎಲ್ಲಾ ಗ್ರಾಮ ಪಂಚಾಯತ್ ಗಳಲ್ಲಿ ಅನುಷ್ಠಾನಗೊಳಿಸ ಲಾಗಿದೆ. ಯೋಜನೆಯ ರೂಪ-ರೇಷೆಗಳು ಒಳಗೊಂಡಂತೆ ಪೂರ್ಣ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| (ಆ) | ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ಈ ಯೋಜನೆ ಅನುಷ್ಠಾನಕ್ಕೆ ದೊರೆತಿರುವ ಆರ್ಥಿಕ ನೆರವು ಮತ್ತು ತಾಂತ್ರಿಕ ಬೆಂಬಲಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ಸದರಿ ಯೋಜನೆಯನ್ನು ನೇರವಾಗಿ ಕೇಂದ್ರ ಸರ್ಕಾರದಿಂದ BSNL ಸಂಸ್ಥೆಯಿಂದ ಮೂಲಕ ಅನುಷ್ಠಾನಗೊಳಿಸಲಾಗಿದೆ. |
| (ಇ) | ರಾಜ್ಯ ಅಥವಾ ಕೇಂದ್ರ ಸರ್ಕಾರ ಈ ಯೋಜನೆ ಅನುಷ್ಠಾನಗೊಳಿಸಲು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆಯೇ? (ಹಾಗಿದ್ದಲ್ಲಿ, ಪೂರ್ಣ ವಿವರ ನೀಡುವುದು) | ಭಾರತ್‌ನೆಟ್ ಯೋಜನೆಯ ಅನುಷ್ಠಾನಕ್ಕಾಗಿ ಯಾವುದೇ ಸಮಿತಿಯನ್ನು ರಚಿಸಲಾಗಿರುವುದಿಲ್ಲ. |

ಸಂ: ಗ್ರಾಅಪ/34/2023, ದಿನಾಂಕ:15.02.2023

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

# ಅನುಬಂಧ

1. ಕೇಂದ್ರ ಸರ್ಕಾರವು ದೇಶದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ Optical Fibre Network (High speed Internet) ಒದಗಿಸುವ ಸಲುವಾಗಿ National Optical Fibre Network ಯೋಜನೆಯನ್ನು 2011-12ನೇ ಸಾಲಿನಲ್ಲಿ ಸ್ಥಾಪಿಸಲಾಯಿತು.
2. National Optical Fibre Network ಯೋಜನೆಯ Bharat Net ಹಂತ-1 ರಡಿ ಒಂದು ಲಕ್ಷ ಗ್ರಾಮ ಪಂಚಾಯತಿಗಳಿಗೆ Optical Fibre Network (High speed Internet) ಒದಗಿಸಲು ತೀರ್ಮಾನಿಸಲಾಯಿತು.
3. ಅದರಂತೆ, ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ Optical Fibre Network ಮೂಲಕ Internet ಸೌಲಭ್ಯವನ್ನು ಒದಗಿಸಲು ಕೇಂದ್ರ ಸರ್ಕಾರವು ಯೋಜನೆಯನ್ನು ಕರ್ನಾಟಕ ರಾಜ್ಯದ ಗ್ರಾಮ ಪಂಚಾಯತಿಗಳಲ್ಲಿ ಅನುಷ್ಠಾನಗೊಳಿಸಲು ನೇರವಾಗಿ BSNL ಸಂಸ್ಥೆಯನ್ನು ಗುರುತಿಸಿ ಕಾರ್ಯಾದೇಶವನ್ನು ನೀಡಲಾಗಿತ್ತು.
4. ಅದರಂತೆ, BSNL ಸಂಸ್ಥೆಯವರು ಗ್ರಾಮ ಪಂಚಾಯತಿಗಳಿಗೆ Optical Fibre Network ಅಳವಡಿಸಲು ತಾಲ್ಲೂಕು ಗಳಲ್ಲಿರುವ Telephone exchange ಕಛೇರಿಯಿಂದ Optical Fibre ಕೇಬಲನ್ನು ಗ್ರಾಮ ಪಂಚಾಯತಿಗಳ ವರೆಗೆ ಅಳವಡಿಸಿರುತ್ತಾರೆ. ಹಾಗೂ ಇದರ ನಿರ್ವಹಣೆಯನ್ನು BSNL ಸಂಸ್ಥೆಯವರಿಗೆ ನೀಡಲಾಗಿತ್ತು.
5. ಸದರಿ ಯೋಜನೆಯ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರವು BBNL ಸಂಸ್ಥೆಯ ಮುಖಾಂತರ BSNL ಸಂಸ್ಥೆಯವರಿಗೆ ಹಂತ ಹಂತವಾಗಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
6. ತದನಂತರ BSNL ಸಂಸ್ಥೆಯು ಅಳವಡಿಸಿದ Optical Fibre Network ನ್ನು ಗ್ರಾಮ ಪಂಚಾಯತಿ ಕಛೇರಿಗಳಿಗೆ ವಿಸ್ತರಿಸಲು BBNL ಸಂಸ್ಥೆಯನ್ನು ಕೇಂದ್ರ ಸರ್ಕಾರವು ಆಯ್ಕೆ ಮಾಡಿರುತ್ತಾರೆ.
7. BBNL ಸಂಸ್ಥೆಯವರು Optical Fibre Network ನ್ನು ಗ್ರಾಮ ಪಂಚಾಯತಿ ಕಛೇರಿಗಳಿಗೆ ವಿಸ್ತರಿಸಿ ONT (Optical Network Terminal) Devices ಗಳನ್ನು ಗ್ರಾಮ ಪಂಚಾಯತಿ ಕಛೇರಿಗಳಲ್ಲಿ ಅಳವಡಿಸಿರುತ್ತಾರೆ ಹಾಗೂ ಇದರ ನಿರ್ವಹಣೆಯನ್ನು BBNL ಸಂಸ್ಥೆಯವರಿಗೆ ನೀಡಲಾಗಿತ್ತು.
8. BBNL ಸಂಸ್ಥೆಯವರು ನಿರ್ವಹಣೆಯ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದೇ ಇರುವುದರಿಂದ ಕೇಂದ್ರ ಸರ್ಕಾರವು ಸದರಿ ನಿರ್ವಹಣೆಯ ಜವಾಬ್ದಾರಿಯನ್ನು ಭಾರತ ಸರ್ಕಾರದ Common Service Centre (CSC) ರವರಿಗೆ 2019-20ನೇ ಸಾಲಿನಲ್ಲಿ ನೀಡಿರುತ್ತಾರೆ.
9. ಪ್ರಸುತ್ತ, ಸದರಿ ನಿರ್ವಹಣೆಯನ್ನು BSNL ಸಂಸ್ಥೆರವರು ನಿರ್ವಹಣೆ ಮಾಡುತ್ತಿರುತ್ತಾರೆ.
10. ಸದರಿ ಯೋಜನೆಯ ಅನುಷ್ಠಾನದಲ್ಲಿ ಹಾಗೂ ಅನುಷ್ಠಾನ/ನಿರ್ವಹಣೆ ಸಂಸ್ಥೆಗಳನ್ನು ಆಯ್ಕೆ ಮಾಡುವುದರಲ್ಲಿ ರಾಜ್ಯ ಸರ್ಕಾರದ ಯಾವುದೇ ಪಾತ್ರವಿರುವುದಿಲ್ಲ.